# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀದರರ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 200 |
| ಪ್ರಶ್ನೆಗೆ ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 10.12.2018 (ಪ್ರವಾಸೋದ್ಯಮ ಇಲಾಖೆಯಿಂದ ವರ್ಗಾವಣೆಗೊಂಡ ಪ್ರಶ್ನೆ) |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬಾಗಲಕೋಟೆ ಜಿಲ್ಲೆ, ಕೂಡಲಸಂಗಮದಲ್ಲಿ ದೆಹಲಿಯ ಅಕ್ಷರಧಾಮದಂತೆ "ಶ್ರೀ ಜಗಜ್ಯೋತಿ ಬಸವೇಶ್ವರ ಜೀವನಾಧಾರಿತ ಅಂತರಾಷ್ಟ್ರೀಯ ಕಲಾತ್ಮಕ ಸಂಗ್ರಹಾಲಯ" ನಿರ್ಮಿಸಿ ಅಂತರಾಷ್ಟ್ರೀಯ ಪ್ರವಾಸಿ ತಾಣವನ್ನಾಗಿ ನಿರ್ಮಾಣ ಮಾಡುವ ಯೋಜನೆಯು ಪ್ರಾರಂಭವಾಗಿದೆಯೇ: ಇಲ್ಲವಾದಲ್ಲಿ ವಿಳಂಬಕ್ಕೆ ಕಾರಣಗಳನ್ನು ತಿಳಿಸುವುದು: | ಹೌದು. ಯೋಜನೆಯನ್ನು ಪ್ರಾರಂಭಿಸಲಾಗಿದೆ.<br><br>ಟೆಂಡರ್ ಪ್ರಕ್ರಿಯೆಗಳ ಮೂಲಕ ಕಾಮಗಾರಿಗಳನ್ನು ಪ್ರಾರಂಭಿಸಲು ಕ್ರಮವಹಿಸಲಾಗುತ್ತಿದೆ. |
| ಆ | ಸದರಿ ಯೋಜನೆಗೆ ಮಂಜೂರಾದ ಅನುದಾನವೆಷ್ಟು; ಇಲ್ಲಿಯವರೆಗೂ ಎಷ್ಟು ಹಣ ಬಿಡುಗಡೆಯಾಗಿದೆ; | ಕೂಡಲ ಸಂಗಮ ಅಭಿವೃದ್ಧಿ ಮಂಡಳಿಯ 12ನೇ ಸಭೆಯಲ್ಲಿ ಕೂಡಲ ಸಂಗಮದಲ್ಲಿ ಶ್ರೀ ಬಸವೇಶ್ವರರ ಅಂತರಾಷ್ಟ್ರೀಯ ಮ್ಯೂಸಿಯಂನ್ನು ನವದೆಹಲಿಯ ಸ್ವಾಮಿನಾರಾಯಣ ಅಕ್ಷರಧಾಮ ಮಾದರಿಯಲ್ಲಿ ಸ್ಥಾಪಿಸಲು ನಿರ್ಣಯಿಸಲಾಗಿರುತ್ತದೆ. ಹಾಗೆಯೇ, ಮಂಡಳಿಯ ವ್ಯಾಪ್ತಿಯ ಕೂಡಲ ಸಂಗಮ, ಬಸವನ ಬಾಗೇವಾಡಿ ಮತ್ತು ಚಿಕ್ಕ ಸಂಗಮ ಸುಕ್ಷೇತ್ರಗಳ ಅಭಿವೃದ್ಧಿಗಾಗಿ ಮತ್ತು ಬಸವ ಮ್ಯೂಸಿಯಂ ನಿರ್ಮಾಣ ಕಾರ್ಯಕ್ಕಾಗಿ 3 ಹಂತಗಳಲ್ಲಿ ಕೈಗೊಳ್ಳಲು ವಿಸ್ತೃತ ಯೋಜನಾ ವರದಿಯನ್ನು ವಿನ್ಯಾಸಕಾರರಿಂದ ತಯಾರಿಸಿದ್ದು, ಮೊದಲನೆ ಹಂತದಲ್ಲಿ ಕೃಷ್ಣಾ ಭಾಗ್ಯ ಜಲನಿಗಮದ ವತಿಯಿಂದ ರೂ.94.68 ಕೋಟಿ ಮತ್ತು ಸರ್ಕಾರದ ವತಿಯಿಂದ ರೂ.44.93 ಕೋಟಿಗಳು ಸೇರಿ ಒಟ್ಟು ಅಂದಾಜು ರೂ.139.60 ಕೋಟಿಗಳ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಸಹ ನಿರ್ಣಯಿಸಲಾಗಿರುತ್ತದೆ.<br><br>ಮೊದಲನೆ ಹಂತದ ಅನುದಾನ ರೂ.139.60 ಕೋಟಿಗಳ ಪೈಕಿ ಕಂದಾಯ ಇಲಾಖೆಯಿಂದ ರೂ.44.93 ಕೋಟಿಗಳಿಗೆ ಸರ್ಕಾರಿ ಆದೇಶ ಸಂಖ್ಯೆ: ಕಂಇ 91 ಆರ್‌ಇಹೆಚ್ 2015, ದಿನಾಂಕ: |

| | | |
|---|---|---|
| | | 03.03.2017ರನ್ವಯ ಆಡಳಿತಾತ್ಮಕ ಅನುಮೋದನೆ ನೀಡಿ, 2017–18ನೇ ಸಾಲಿನಲ್ಲಿ ರೂ.15.72 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಲಾಗಿದ್ದು, 2018–19ನೇ ಸಾಲಿನ ಆಯವ್ಯಯದಲ್ಲಿ ನಿಗಧಿಪಡಿಸಿರುವ ರೂ.10.05 ಕೋಟಿಗಳ ಅನುದಾನ ಬಿಡುಗಡೆಗೊಳಿಸಲು ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.<br><br>ಕೂಡಲ ಸಂಗಮ ಮತ್ತು ಚಿಕ್ಕ ಸಂಗಮ ಕ್ಷೇತ್ರಗಳ ಅಭಿವೃದ್ಧಿ ಕಾಮಗಾರಿಗಳ ಡಿ.ಪಿ.ಆರ್. ವರದಿಯ ರೂ.94.68 ಕೋಟಿ ಅನುದಾನದ ಅಂದಾಜು ಮೊತ್ತಕ್ಕೆ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರಿಂದ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಕಾಮಗಾರಿಗಳ ಪ್ರಗತಿ ಅನುಗುಣವಾಗಿ ಮಂಡಳಿಗೆ ಹಂತ–ಹಂತವಾಗಿ ಬಿಡುಗಡೆಯಾಗುವುದೆಂದು ಮಂಡಳಿಯ ಆಯುಕ್ತರು ವರದಿ ನೀಡಿರುತ್ತಾರೆ. |
| ಇ | ಸದರಿ ಯೋಜನೆಯಲ್ಲಿ "ಶರಣಗ್ರಾಮ" ನಿರ್ಮಾಣ ಮಾಡುವ ಕಾಮಗಾರಿಯನ್ನು ಸೇರಿಸಿಕೊಳ್ಳಲಾಗಿದೆಯೇ; ಈ ಯೋಜನೆಗೆ ಬಿಡುಗಡೆಯಾದ ಅನುದಾನ ಎಷ್ಟು; | ಶರಣಗ್ರಾಮ ನಿರ್ಮಾಣ ಮಾಡುಲು ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಇದಕ್ಕಾಗಿ ರೂ.5,38,17,618/–ಗಳ ಅನುದಾನ ಕಾಯ್ದಿರಿಸಲಾಗಿದೆ. |
| ಈ | ಸದರಿ ಯೋಜನೆಗೆ ಬಸವಣ್ಣನವರ ಕುರಿತು ಸಂಶೋಧನೆ ಮಾಡಿದ ಕಲಾವಿದರನ್ನು ನೇಮಕ ಮಾಡಲಾಗಿದೆಯೇ; | ಇಲ್ಲ |
| ಉ | ಸದರಿ ಯೋಜನೆಯ ಕಾಮಗಾರಿ ಯಾವ ಹಂತದಲ್ಲಿದೆ; ಹಾಗೂ ಈ ಯೋಜನೆಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು ? | ಪ್ರಸ್ತುತ ಮೊದಲನೆ ಹಂತದ ಕಾಮಗಾರಿಗಳನ್ನು ಪ್ರಾರಂಭಿಸಲು ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು, ಅದಷ್ಟು ಬೇಗ ಕಾಮಗಾರಿಗಳನ್ನು ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. |

**ಸಂಖ್ಯೆ: ಕಂಇ 94 ಆರ್‌ಇಹೆಚ್ 2018**

(ಆರ್.ವಿ. ದೇಶಪಾಂಡೆ)
ಕಂದಾಯ ಸಚಿವರು